## ಕಳೆದ ಸಂಚಿಕೆಯಲ್ಲಿ



ಮೂರನೇ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಲೋಹಿಯಾ ಮನಸ್ಸು ನಿರಾಶೆ ಮತ್ತು ಆತಂಕಗಳಲ್ಲಿ ಹೊಯ್ದಾಡುತ್ತಿತ್ತು. ತಮ್ಮ ಮನಸ್ಥಿತಿ ಹಾಗೂ ವಿಚಾರಗಳನ್ನು ಗೆಳತಿ ರಮಾಗೆ ಬರೆದ ಪತ್ರಗಳಲ್ಲಿ ಅವರು ವ್ಯಕ್ತಪಡಿಸಿದ್ದರು. ಫೂಲ್‌ಪುರ ಲೋಕಸಭಾ ಕ್ಷೇತ್ರದಲ್ಲಿ ನೆಹರು ವಿರುದ್ಧ ಲೋಹಿಯಾ ಸ್ಪರ್ಧಿಸಿದ್ದರು. ಸೋಲು ಖಚಿತವೆನ್ನುವುದು ತಿಳಿದೂ, ಪ್ರಧಾನಿಯ ಸೋಲಿನಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಎನ್ನುವ ಭಾವದಿಂದ ಸ್ಪರ್ಧಿಸಿದ್ದರು. ಪ್ರಧಾನಿಯ ಕೈಯಲ್ಲಿ ಅಪಾರ ಅಧಿಕಾರವಿರುವುದು ಪ್ರಜಾಪ್ರಭುತ್ವಕ್ಕೆ ಹಾನಿಕರ ಎನ್ನುವುದು ಅವರ ನಿಲುವಾಗಿತ್ತು. ವಿಶ್ವದ ಅಗ್ರಗಣ್ಯ ಸಮಾಜವಾದಿ ಚಿಂತಕರಾಗಿದ್ದ ಲೋಹಿಯಾ, ಅಥೆನ್ಸ್‌ನಲ್ಲಿ ನಡೆದ (1961) ಸಮಾಜವಾದಿಗಳ ಸಮ್ಮೇಳನಕ್ಕಾಗಿ ತಮ್ಮ 'ಸಪ್ತಕ್ರಾಂತಿ' ಚಿಂತನೆಗಳನ್ನು ಮಂಡಿಸಿದ್ದರು. ಚುನಾವಣೆಯಲ್ಲಿ ಲೋಹಿಯಾ ಸೋತರು. ಅವರ ಆಗತ್ಯವನ್ನು ಮತದಾರರು ಅರ್ಥ ಮಾಡಿಕೊಳ್ಳಲಿಲ್ಲ. ಚೀನಾದ ವಿಸ್ತರಣೆಯ ದಾಹದ ಕುರಿತೂ ಲೋಹಿಯಾರ ಮುನ್ನೋಟದ ಮಾತುಗಳನ್ನು ದೇಶ ಸರಿಯಾಗಿ ಕೇಳಿಸಿಕೊಳ್ಳಲಿಲ್ಲ.

'ಆಕೆಯ ಮೈಕಟ್ಟು ಸಾಮಾನ್ಯವಾಗಿ ಜನ ಹೇಳುವಂಥ ಅಪ್ಸರೆಯ ಮೈಕಟ್ಟು. ಆಕೆಯನ್ನು ಪೂರ್ತಿ ನೋಡಲು ಕೂಡ ನನಗೆ ಸಾಧ್ಯವಾಗಲಿಲ್ಲ. ಅವಳು ಎಷ್ಟು ವೇಗವಾಗಿ ಸಾಗಿ ಹೋದಳೆಂದರೆ, ಅವಳು ಪಕ್ಕದಲ್ಲಿ ಹೋದದ್ದೇ ಗೊತ್ತಾಗಲಿಲ್ಲ. ಅವಳು ಒಂದು ಬಾರಿ ಮುಖ ತಿರುಗಿಸಿ ಹಿಂದೆ ನೋಡಿದರೆ ಎಷ್ಟು ಚೆನ್ನಾಗಿರುತ್ತದೆ, ಆ ಮುಖ ನಿಜಕ್ಕೂ ಹೇಗೆ ಕಾಣುತ್ತದೆ... ಎಂದೆಲ್ಲ ಅನಿಸತೊಡಗಿತು. ಆದರೆ ಅವಳು ಹಿಂದಿರುಗಿ ನೋಡಲೇ ಇಲ್ಲ! ತುಂಬಾ ಮುಂದೆ ಹೋದ ಮೇಲೆ ಅವಳು ಒಮ್ಮೆ ಹಿಂದಿರುಗಿ ನೋಡಿದರೂ, ಆ ಮುಖ ಹೇಗಿದೆಯೆಂದು ಗೊತ್ತಾಗಲಿಲ್ಲ.

'ನನಗೆ ನೆನಪಿರುವಂತೆ, ಕಥೆಗಳಲ್ಲಿ ನಾವು ಅಪ್ಸರೆಯರ ಬಗ್ಗೆ, ಕಿನ್ನರಿಯರ ಬಗ್ಗೆ ಕೇಳುತ್ತೇವಲ್ಲ, ಅಂಥ ಜೀವಂತ ಮಾದರಿ ಅಂದು ನನ್ನೆದುರು ಸುಳಿದಿತ್ತು. ಅದೆಂಥ ದೈಹಿಕ ಶಕ್ತಿಸಾಮರ್ಥ್ಯ! ಅದೆಂಥ ಬೆಡಗು! ಅವಳು ಹೋಗುತ್ತಿದ್ದ ರೀತಿ ನೋಡಿದರೆ ಅವಳು ಕೈ ಬೀಸಿಕೊಂಡು ಹೋಗುತ್ತಿರಲಿಲ್ಲ. ಅಷ್ಟು ಜೋರಾಗಿ ಹೋಗುತ್ತಿದ್ದರೂ ಅವಳ ಬೆನ್ನಿನ ಮೇಲೆ ಒಂದು ಸಾಮಾನಿನ ಮೂಟೆ ಇದ್ದೇ ಇತ್ತು.'

ಹೀಗೆ ಸೌಂದರ್ಯಾನ್ವೇಷಣೆಯಲ್ಲಿ ಲೀನವಾದ ಲೋಹಿಯಾರ ಮನಸ್ಸು ಮರು ಚಣಕ್ಕಾಗಲೇ ಸಮಾಜವಿಜ್ಞಾನಿಯ ವೈಜ್ಞಾನಿಕ ನೋಟದತ್ತ ಹೊರಳುತ್ತದೆ; ಗಡಿ ಪ್ರದೇಶಗಳ ಜನಸಮುದಾಯದ ಸಾಮಾಜಿಕ ಆಯಾಮಗಳನ್ನು ಗ್ರಹಿಸತೊಡಗುತ್ತದೆ. ಗಡಿ ಪ್ರದೇಶಗಳಲ್ಲಿ ಹೆಚ್ಚುತ್ತಿದ್ದ ಚೀನಾ ಪ್ರಭಾವಕ್ಕೂ, ಭಾರತದ ಜನರ ಮನಸ್ಸಿನಲ್ಲಿ ಬೇರು ಬಿಟ್ಟಿರುವ ಜಾತಿಯ ಕಟ್ಟುಪಾಡುಗಳಿಗೂ ಸಂಬಂಧವಿದೆ ಎನ್ನಿಸತೊಡಗುತ್ತದೆ:

'ಇಲ್ಲಿ ಚೀನೀಯರ ಪ್ರಭಾವ ಮಾಕುಂ ಎಂಬ ಸ್ಥಳಕ್ಕೆ ಸಂಬಂಧಪಟ್ಟ ಒಂದು ವಿದ್ಯಮಾನದಿಂದ ಅರಿವಾಗುತ್ತದೆ. ಮಾಕುಂ ಭಾರತಕ್ಕೆ ಸೇರಿದ ಚಹಾ ತೋಟಗಳಿರುವ ಪ್ರದೇಶ. ಸುತ್ತಮುತ್ತಲ ಚಹಾ ತೋಟಗಳೊಡನೆ ಅದು ಸಂಪರ್ಕವಿರಿಸಿಕೊಂಡಿದೆ. ಅಲ್ಲಿ ಸಾಕಷ್ಟು ಮನೆಗಳು ಚೀನೀಯರವು. ಚೀನೀಯರ ಹೋಟೆಲ್‌ಗಳೂ ಇವೆ. ಅಲ್ಲಿಯ ಜನರಿಗೆ ಈ ಚೀನೀಯರೊಡನೆ ಒಡನಾಟವಿದೆ. ಸಾಕಷ್ಟು ಸಂಖ್ಯೆಯಲ್ಲಿ ಚೀನೀಯರು ಮಾಕುಂನಲ್ಲಿ ನೆಲೆಸಿದ್ದಾರೆ.

'ಈ ಸಂದರ್ಭದಲ್ಲೇ ಇನ್ನೊಂದು ಮಾತನ್ನೂ ಹೇಳಿಬಿಡಬೇಕು: ನಾವು ಭಾರತೀಯರು ಒಂದು ದೃಷ್ಟಿಯಿಂದ ತುಂಬ ಅಯೋಗ್ಯರಾದ ಜನ. ಒಂದು ದೃಷ್ಟಿಯಿಂದ ಮಾತ್ರವಲ್ಲ, ಅನೇಕ ವಿಚಾರಗಳಲ್ಲಿ ನಾವು ತುಂಬ ಅಯೋಗ್ಯರು. ಅಂಥ ಒಂದು ವಿಚಾರವನ್ನು ಮಾತ್ರ ನಾನು ಇಲ್ಲಿ ಹೇಳುತ್ತಿದ್ದೇನೆ. ಅದೇನೆಂದರೆ, ಒಬ್ಬ ಚೀನೀ ಮನುಷ್ಯ ಇಲ್ಲಿಗೆ ಬಂದು ಅಸ್ಸಾಂ ಹಾಗೂ ಊರ್ವಶೀಯಂನಲ್ಲಿ ನೆಲೆಸುತ್ತಾನೆ. ಇಲ್ಲಿಯ ಜನಗಳ ಜೊತೆ ಸ್ನೇಹ ಬೆಳೆಸುತ್ತಾನೆ. ಅವರ ಜೊತೆ ಊಟ ತಿಂಡಿ ಮಾಡುತ್ತಾನೆ. ಹಬ್ಬಗಳಲ್ಲಿ ಭಾಗವಹಿಸುತ್ತಾನೆ. ವಿವಾಹ ಸಂಬಂಧ ಬೆಳೆಸುತ್ತಾನೆ. ಅಂದರೆ, ಹೆಚ್ಚುಕಡಿಮೆ ಅವರಂತೆಯೇ ಆಗಿಬಿಡುತ್ತಾನೆ. ಇಂಥ ಪ್ರದೇಶಗಳ ಜನರ ಮನಸ್ಸಿನಲ್ಲಿ ತನ್ನ ದೇಶದ ಬಗ್ಗೆ ಒಳ್ಳೆಯ ಭಾವನೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗುತ್ತಾನೆ.

'ಆದರೆ ನಾವು ಭಾರತೀಯರು ಸ್ನೇಹ ಮಾಡುವುದನ್ನೇನೋ ಬಲ್ಲೆವು. ಆದರೆ ವಿವಾಹ ಸಂಬಂಧಗಳಿಂದ ಬಹುದೂರ. ಕಾರಣ, ಅವರದು ಯಾವ ಜಾತಿಯೋ ಗೊತ್ತಿಲ್ಲ, ಅವರು ಯಾವ ಧರ್ಮಕ್ಕೆ ಸೇರಿದವರೋ ಗೊತ್ತಿಲ್ಲ... ಈ ಥರದ ಭಯ. ಊಟ, ತಿಂಡಿ ಮಾಡುವುದರಲ್ಲಿ ಕೂಡ ನಮ್ಮಲ್ಲಿ ಬಹುಮಂದಿ ಒಬ್ಬರು ಇನ್ನೊಬ್ಬರ ಅಚ್ಚಿನಲ್ಲಿ ಎರಕ ಹೊಯ್ದಂತಿದ್ದೇವೆ. ಒಬ್ಬ ಮಾಂಸ ತಿನ್ನುತ್ತಾನೆ, ಇನ್ನೊಬ್ಬ ತಿನ್ನುವುದಿಲ್ಲ. ಆ ವ್ಯತ್ಯಾಸ ಇದ್ದುಕೊಳ್ಳಲಿ. ಆದರೆ ಬೇರೆ ಯಾರದಾದರೂ ಜೊತೆ ಊಟ, ತಿಂಡಿ ಮಾಡಿದರೆ ನಮ್ಮ ಜಾತಿ ಹಾಳಾಗಿ ಹೋಗುತ್ತದೆ; ಬೇರೆ ಜಾತಿಯವರ ಜೊತೆ ಮದುವೆ ಮಾಡಿಕೊಂಡರೆ ನಾವು ಯಾರಿಗೂ ಮುಖ ತೋರಿಸಲಾಗುವುದಿಲ್ಲ... ಇಂಥವೆಲ್ಲ ಮೂರ್ಖ ಅನಿಸಿಕೆಗಳು.

'ಇದರ ಪರಿಣಾಮ ಏನಾಗುತ್ತದೆಂದರೆ, ಭಾರತದ ಕಡೆಯಿಂದ ಆ ಜಾಗಕ್ಕೆ ಯಾರಾದರೂ ಹೋಗುತ್ತಾರೆ ಅನ್ನಿ, ಅವರು ಆ ಜನರ ಜೊತೆ ಒಂದಾಗಿ ಇರಲು ಸಾಧ್ಯವಿಲ್ಲವೆಂಬಂತೆ ನಡೆದುಕೊಳ್ಳುತ್ತಾರೆ. ಅವರ ಮನಸ್ಸನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಅಸಮರ್ಥರೆನಿಸಿಕೊಳ್ಳುತ್ತಾರೆ. ಆದರೆ, ಚೀನೀ ಜನ ಅಸ್ಸಾಮಿನ ಮಾರ್ಘೆರಿಟಾ, ಲಿಡೋ... ಹೀಗೆ ಇನ್ನೂ ಅದೆಷ್ಟು ಪ್ರದೇಶಗಳಲ್ಲಿ ಹೋಗಿ ನಿಶ್ಚಿಂತರಾಗಿ ನೆಲೆಸಿದ್ದಾರೋ ಗೊತ್ತಿಲ್ಲ.'

ಈ ಸಮಸ್ಯೆಗಳ ಜೊತೆಗೆ, ಊರ್ವಶೀಯಂ ಪ್ರದೇಶದ 35 ಸಾವಿರ ಚದರ ಅಡಿಗಳನ್ನು ಭಾರತೀಯರ ಪಾಲಿಗೆ ಭಾರತ ಸರ್ಕಾರವೇ ಮುಚ್ಚಿದಾಗ ಲೋಹಿಯಾ ಅದನ್ನು ಪ್ರತಿಭಟಿಸಿದರು; ಆ ಪ್ರದೇಶ ಹೊಕ್ಕರು; ಸರ್ಕಾರದ ನಿಲುವನ್ನು ಖಂಡಿಸಿದರು, ಬಂಧನಕ್ಕೂ ಒಳಗಾದರು.

***

ಇಸವಿ 1960. ಸರ್ದಾರ್ ರಾಮ್‌ಸಿಂಗ್ ಅವರಿಂದ ಮಹತ್ವದ ಮಾಹಿತಿಯೊಂದು ಲೋಹಿಯಾಗೆ ಸಿಕ್ಕಿತು. ರಾಮ್‌ಸಿಂಗ್ ಒಂದು ಕಾಲಕ್ಕೆ ಲೆಹ್–ಲಡಾಖ್ ಪ್ರದೇಶದ ಅಧಿಕಾರಿಯಾಗಿದ್ದರು. ರಾಮ್‌ಸಿಂಗ್ ಕೊಟ್ಟ ಮಾಹಿತಿಯ ಪ್ರಕಾರ, ಮಾನಸ ಸರೋವರದ ಉತ್ತರ ಭಾಗದಲ್ಲಿರುವ ಮನ್ನಾರ್ ಎಂಬ ಹಳ್ಳಿ ಭಾರತಕ್ಕೆ ತನ್ನ ಭೂಕಂದಾಯ ಕೊಡುತ್ತಿತ್ತು. ಅಲ್ಲಿನ ಜನ ಹಾಗೂ ಇನ್ನಿತರ ವಸತಿ ಪ್ರದೇಶಗಳ ಅಂಕಿಅಂಶಗಳು ಭಾರತದ ಜನಗಣತಿಯ ಭಾಗವಾಗಿದ್ದವು.

ಈ ಮಾಹಿತಿಯ ಮೂಲಕ ಲೋಹಿಯಾ ಗಡಿ ಪ್ರದೇಶದ ಚರಿತ್ರೆ ಕುರಿತ ಇನ್ನಷ್ಟು ಸಾಧಾರವಾದ ಗ್ರಹಿಕೆಗಳನ್ನು ಮಂಡಿಸಿದರು:

ಒಂದು ಕಾಲಕ್ಕೆ ಲಡಾಖ್ ಪ್ರಾಂತದ ರಾಜನೊಬ್ಬ ಮನ್ನಾರ್ ಎಂಬ ಗ್ರಾಮವೊಂದನ್ನು ಬಿಟ್ಟು ಉಳಿದ ಭೂಮಿಯನ್ನು ಟಿಬೆಟ್ಟಿನ ರಾಜನೊಬ್ಬನಿಗೆ ಕೊಟ್ಟಿದ್ದ. ಆದರೆ ಮನ್ನಾರ್ ಎಂಬ ಹಳ್ಳಿಯನ್ನು ಭಾರತೀಯ ಸಾರ್ವಭೌಮತ್ವದ ಸಂಕೇತವಾಗಿ ಹಾಗೇ ಉಳಿಸಿಕೊಂಡಿದ್ದ. ಆ ಕಾಲದ ಉಡುಗೊರೆ ಒಪ್ಪಂದ ಈ ಕಾಲದಲ್ಲಿ ಅನೂರ್ಜಿತವಾಗಬಲ್ಲದು. ಈ ಉಡುಗೊರೆ ಅಕಸ್ಮಾತ್ ಊರ್ಜಿತವಾಗಿದ್ದರೂ, ಟಿಬೆಟ್ ಸರ್ಕಾರಕ್ಕೆ ನೀಡಲಾದ ಈ ಉಡುಗೊರೆಯ ಫಲಾನುಭವಿ ಚೀನಾ ಆಗಲು ಸಾಧ್ಯವಿಲ್ಲ.'

ಲೋಹಿಯಾ ಈ ಘಟ್ಟದಲ್ಲಿ ಚೀನಾ ಕೂಡ ಕಲಿಯಬೇಕಾದ ವಿಶೇಷ ಪಾಠವೊಂದನ್ನು ನೆನಪಿಸಲೆತ್ನಿಸಿದರು: 'ಲೆನಿನ್ ಹೊಸ ಹಾಗೂ